◆ ನಿಮ್ಮ ಬಾಲ್ಯ, ವಿದ್ಯಾಭ್ಯಾಸ ಮತ್ತು ತರಗತಿಯಲ್ಲಿ ಪ್ರಭಾವ ಬೀರಿದವರ ಬಗೆಗೆ ಹೇಳಬಹುದೇ?

ಬಾಲ್ಯ ಒಂಟಿತನದ್ದು. ರೇಡಿಯೋ ಕೂಡ ಅಪರೂಪವಾಗಿದ್ದ ಆ ಕಾಲದ ನನ್ನ ಸಮಕಾಲೀನರಿಗೆ ತಮ್ಮದೇ ಲೋಕವನ್ನು ಕಟ್ಟಿಕೊಳ್ಳಲು ಇದ್ದ ಒಂದು ಹೆದ್ದಾರಿಯೆಂದರೆ 'ಓದುವುದು' ಮಾತ್ರ. ಕನ್ನಡದ ಕಾದಂಬರಿ, ಕಥೆಗಳ ಜೊತೆಗೆ ಬಂಗಾಳಿ ಕೃತಿಗಳು, ಶೇಕ್ಸ್‌ಪಿಯರ್, ಜೊನಾಥನ್ ಸ್ವಿಫ್ಟ್, ವಾಲ್ಟರ್ ಸ್ಕಾಟ್, ಟಾಲ್‌ಸ್ಟಾಯ್, ಗಾರ್ಕಿ ಇವರ ಕೃತಿಗಳ ಅನುವಾದವನ್ನು ಹತ್ತನೆಯ ತರಗತಿಗೆ ಬರುವ ಹೊತ್ತಿಗೆ ಓದಿದ್ದೆ. ಅದಕ್ಕಾಗಿ ಚಿತ್ರದುರ್ಗದ ಸೆಂಟ್ರಲ್ ಲೈಬ್ರರಿಗೆ ಋಣಿ. ಓದಿನ ಈ ಲೋಕ ಮನಸ್ಸಿನೊಳಗಿನದು.

ಹೊರಗಿನ ವಾಸ್ತವದಲ್ಲಿ ಗುಬ್ಬಿ, ಹುಣಸೂರು, ಮದ್ದೂರು, ಬೆಂಗಳೂರು, ಚಿತ್ರದುರ್ಗ, ಮೈಸೂರುಗಳಲ್ಲಿ ನನ್ನ ಬಾಲ್ಯ, ಹದಿಹರೆಯ ಹಂಚಿಹೋಗಿದೆ. ಅನಂತರ 'ಉದ್ಯೋಗಪರ್ವ'ದಲ್ಲಿ ಮೈಸೂರು, ಶಿವಮೊಗ್ಗ, ಶಿಕಾರಿಪುರ, ಆನೇಕಲ್ಲು, ಹೊಸಪೇಟೆ, ಬೆಂಗಳೂರುಗಳಲ್ಲಿ ವಾಸ ಮಾಡುತ್ತ, ಯಾವ ಊರಿನವನೂ ಆಗದೆ, ಯಾವ ಒಂದು ಸ್ಥಳದಲ್ಲೂ ಬೇರು ಬಿಡದೆ, ಯಾವುದೇ ಒಂದು ಊರಿನ ನೆನಪು ಗಾಢವಾಗಿ ಇರದೆ, ಯಾವುದೇ ಒಂದು ರೀತಿಯ ನುಡಿಬಳಕೆಗೆ ಒಗ್ಗದೆ, ಕಥೆಗಳನ್ನು, ಕಾದಂಬರಿಗಳನ್ನು ಬರೆಯುವ ಧೈರ್ಯ ಬರದೆ, ವಿಮರ್ಶೆಯ ಬೀದಿಗಳಲ್ಲಿ ಅಡ್ಡಾಡಲು, ಅನುವಾದ ಲೋಕದ ಪ್ರಜೆಯಾಗಲು ಸಹಾಯವಾಯಿತು ಅನಿಸುತ್ತದೆ.

ಏಳನೆಯ ತರಗತಿಯಲ್ಲಿ ಕನ್ನಡ ಕಲಿಸುತ್ತಿದ್ದ ಚೆನ್ನಪ್ಪ ಎರೆಸೀಮೆಯವರು, ಹೈಸ್ಕೂಲಿನಲ್ಲಿ ರನ್ನನ ಗದಾಯುದ್ಧದ ಆಯ್ದ ಭಾಗವನ್ನು ಪಾಠ ಮಾಡಿದ ರಾಮಪ್ಪ ಮೇಷ್ಟರು, ಬಿ.ಎ ಓದುವಾಗ ಕನ್ನಡದಲ್ಲಿ ಸುಜನಾ, ಜಿ.ಎಚ್. ನಾಯಕ್, ಕೆಲವು ಕಾಲ ಎಚ್.ಎಂ. ಚನ್ನಯ್ಯ ಇವರ ಪಾಠಗಳು, ಒಥೆಲೊ, ಮ್ಯಾಕ್‌ಬೆತ್ ಪಾಠ ಮಾಡಿದ ಗುರುರಾಜಾ ರಾವ್, ಜೇನ್ ಆಸ್ಟಿನ್ ಪಾಠ ಮಾಡಿದ ಗೋವಿಂದರಾವ್, ಎಂ.ಎ. ತರಗತಿಗೆ ಹೋದಾಗ ದಾಮೋದರ ರಾವ್, ಯು.ಆರ್. ಅನಂತಮೂರ್ತಿ, ಪೋಲಂಕಿ ರಾಮಮೂರ್ತಿ, ಅಶೋಕ್ ಕುಮಾರ್ ಚಂದಾ ಇವರ ಪಾಠಗಳಿಂದ ಸಾಹಿತ್ಯದ ಸಂವೇದನೆಗೆ ಮೊನಚು ಬಂದಿತು. ಸಾಹಿತ್ಯ ಮತ್ತು ವಿಮರ್ಶೆಯ ತತ್ವಗಳನ್ನು ಬೋಧಿಸಿದ ದಾಮೋದರ ರಾವ್ ಅವರಿಂದ ವಿಮರ್ಶೆಯ ವಿವೇಕ, ಸಮತೋಲದ ಪರಿಶೀಲನೆಯ ಅಭ್ಯಾಸ, ಭಾಷೆಯ ಮಿತಬಳಕೆ ಅರಿವಿಗೆ ಬಂದಿತು.



◆ ನಿಮ್ಮ ಕಾಲದ ಶಿಕ್ಷಣ – ಶಿಕ್ಷಕರ ಬಗೆಗೆ ಗಮನಿಸಿದರೆ ಅದೊಂದು 'ಸುವರ್ಣಯುಗ' ಅನಿಸುತ್ತದೆ.

'ಸುವರ್ಣಯುಗ' ಅಂತ ಯಾವುದೂ ಇರಲಿಲ್ಲ, ಇರಲ್ಲ. ನೆನಪಿನಲ್ಲಿ ನಮಗೆ ಪ್ರಿಯವಾದದ್ದು ಮಾತ್ರ ಉಳಿದು, ಆ ನೆನಪುಗಳಿಗೆ ಬಂಗಾರದ ಬೆಲೆ ಬರುತ್ತದೆ ಅಷ್ಟೆ. ನಾನು ಎಂ.ಎ. ಓದಿದ 1970ರ ದಶಕ ವಿಶ್ವವಿದ್ಯಾಲಯಗಳಲ್ಲಿ ಭ್ರಷ್ಟತೆ ಚಿಗುರುತ್ತಿದ್ದ ಕಾಲ ಅಂತಲೂ ಈಗ ಅನಿಸುತ್ತದೆ. ನೀವು ಯಾರನ್ನೆಲ್ಲ ಆ ಕಾಲದ ವಿದ್ವಾಂಸರು ಎಂದು ಗುರುತಿಸುತ್ತೀರೋ, ಅವರೆಲ್ಲ ಆಡಳಿತದ ವ್ಯವಸ್ಥೆ ಮತ್ತು ಆಡಳಿತಗಾರರ ಕಾಟಕ್ಕೆ ನಲುಗಿದವರೂ ಆಗಿದ್ದರು. ನನ್ನಂಥವರಿಗೆ ಸಾಮಾಜಿಕವಾಗಿ ದೊರಕಿದ ಅನುಕೂಲದಿಂದ ಬದುಕು ಚೆನ್ನಾಗಿದೆ ಅನಿಸುತ್ತಿತ್ತು. ಪ್ರಾಮಾಣಿಕತೆ, ಬದ್ಧತೆ ಇರುವ ವ್ಯಕ್ತಿಗಳ ಬದುಕು ಯಾವ ಕಾಲದಲ್ಲೂ, ದೇಶದಲ್ಲೂ ಸುಲಲಿತವಾಗಿ ಇರಲಿಲ್ಲ, ಅಲ್ಲವೇ?

> ಪ್ರಾಮಾಣಿಕತೆ, ಬದ್ಧತೆ ಇರುವ ವ್ಯಕ್ತಿಗಳ ಬದುಕು ಯಾವ ಕಾಲದಲ್ಲೂ, ದೇಶದಲ್ಲೂ ಸುಲಲಿತವಾಗಿ ಇರಲಿಲ್ಲ.